International Journal of Kannada Research
www.kannadajournal.com

ISSN: 2454–5813
IJKR 2020; 6(2): 97-105
© 2020 IJKR
www.kannadajournal.com
Received: 13-01-2020
Accepted: 17-02-2020

**ಬಿ.ಆರ್.ರಾಜು**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ, ಗೋಖಲೆ
ಶತಮಾನೋತ್ಸವ
ಕಾಲೇಜು, ಅಂಗೋಲಾ,
ಉತ್ತರ ಕನ್ನಡ

**Corresponding Author:**
**ಬಿ.ಆರ್.ರಾಜು**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ, ಗೋಖಲೆ
ಶತಮಾನೋತ್ಸವ
ಕಾಲೇಜು, ಅಂಗೋಲಾ,
ಉತ್ತರ ಕನ್ನಡ

# ದಿನಕರ ದೇಸಾಯಿಯವರ ಸಾಹಿತ್ಯದಲ್ಲಿ ಸಾಮಾಜಿಕ ಸಂವೇದನೆಯ ಒಂದು ಅಧ್ಯಯನ

**ಬಿ.ಆರ್.ರಾಜು**

## ಅಮೂರ್ತ

ದಿನಕರ ದೇಸಾಯಿಯವರ ಸಾಹಿತ್ಯದಲ್ಲಿ ಸಾಮಾಜಿಕ ಸಂವೇದನೆ ಕುರಿತಾದ ಮಹತ್ವದ ಲೇಖನ ರಚನೆಯಲ್ಲಿ ರಕ್ಷಿಸಲಾಗಿದೆ. ಶ್ರೀ ಸದಾನಂದ ಅವರು ಬರೆದ ದಿನಕರ ದೇಸಾಯಿ ಅವರು ಬರೆದ ದಿನಕರ ದೇಸಾಯಿ ಎಂಬ ಕಿರುಹೊತ್ತಿಗೆ ಲೇಖನದ ರಚನೆಯಲ್ಲಿ ಗಮನಿಸಲಾಗಿದೆ. ದಿನಕರ ದೇಸಾಯಿಯವರು ದಿವಂಗತರಾದ ಸಂದರ್ಭದಲ್ಲಿ ನಾಡಿನ ಎಲ್ಲಾ ಪ್ರಮುಖ ದಿನಪತ್ರಿಕೆಗಳು ಸಂಪಾದಕೀಯ ಬರೆದು ಅವರಿಗೆ ಗೌರವ ವ್ಯಕ್ತಪಡಿಸಿದವು, ಸಂಪಾದಕೀಯಗಳು ದಿನಕರ ಸಾವಿನ ಸಂದರ್ಭದಲ್ಲಿ ಬಂದ ಪತ್ರಿಕಾ ವರದಿ ಅವರ ಅಭಿಮಾನಿಗಳ ನಿಕಟವರ್ತಿಗಳ ಲೇಖನ ಕವನ ಚುಟುಕು 19082 ನೆಯ ಇಸ್ವಿಯಲ್ಲಿ ಬಂದ ಸಂದರ್ಭದಲ್ಲಿ ಅವರನ್ನು ಸಂದರ್ಶಿಸಿ ಅವರ ವಿಚಾರಗಳನ್ನು ಧ್ವನಿಸುರುಳಿಯಲ್ಲಿ ಮುನಿಸಿಕೊಂಡಿದ್ದು ಅದನ್ನು ಲೇಖನ ರಚನೆಯಲ್ಲಿ ಆಕರವನ್ನಾಗಿ ಬಳಸಿಕೊಳ್ಳಲಾಗಿದೆ. ಪತ್ರಿಕೆಗಳನ್ನು ಅಲ್ಲಿಯ ದಿನಕರರು ಬರೆದ ಮುಖಪುಟ ಲೇಖನ ಸಂಪಾದಕೀಯಗಳನ್ನು ಲೇಖನದ ರಚನೆ ಆಧಾರವಾಗಿ ಬಳಸಿಕೊಳ್ಳಲಾಗಿದೆ. ದಿನಕರ ದೇಸಾಯಿಯವರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣ ಅವರ ಅವಧಿಗಳಲ್ಲಿ ಜೀವನದ ವಿವರಗಳನ್ನು ದಿನಕರ ದೃಷ್ಟಿ ಕೋಣವನ್ನು ಲೇಖನ ರಚನೆಗೆ ಬಳಸಿಕೊಳ್ಳಲಾಗಿದೆ. ಒಬ್ಬ ಖ್ಯಾತ ಸಾಹಿತಿ ಎಂಬ ಕೀರ್ತಿಯ ಬಗೆಗೆ ನನಗೆ ಅನ್ಯಮತ ಅವರ ಜೀವನವು ಒಂದು ವೈಚಾರಿಕ ಸಿದ್ದಾಂತದ ಮೇಲೆ ನಿಂತಿದೆ ಎಂದು ನನಗೀಗ ಅರ್ಥವಾಯಿತು. ದಿನಕರ ದೇಸಾಯಿಯವರು ಒಬ್ಬ ಮಹಾನ್ ವ್ಯಕ್ತಿ ಅವರನ್ನು ಅರಿಯಬೇಕು ಎಂಬ ಡಿವಿಜಿಯವರ ಮಾತು ಅತ್ಯಂತ ಮಹತ್ವವಾಗಿದೆ. ಇಂತಹ ಮಹಾನ್ ವ್ಯಕ್ತಿಯ ಬದುಕು ಬರಹಗಳನ್ನು ಇಡಿಯಾಗಿ ನೋಡುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ. ಸಾಹಿತ್ಯದಲ್ಲಿ ಸಾಮಾಜಿಕ ಸಂವೇದನೆ ಬದುಕು ಬರಹಗಳನ್ನು ಸಮಕಾಲೀನ ಲೇಖನದ ಉದ್ದೇಶ ಮತ್ತು ವ್ಯಾಪ್ತಿ ಯಾಗಿದೆ. ಅವರ ಬದುಕು ಬರಹಗಳನ್ನು ಸಮಕಾಲೀನ ಸಂದರ್ಭದಲ್ಲಿ ನೆನಪಿಸುವ ಲೇಖನದ ಉದ್ದೇಶ ಮತ್ತು

ವ್ಯಾಪ್ತಿ ಯಾಗಿದೆ.

**ಪ್ರಮುಖ ಪದಗಳು:** ದಿನಕರ ದೇಸಾಯಿ. ಸಾಹಿತ್ಯ. ಮತ್ತು ಸಾಮಾಜಿಕ ಸಂವೇದನೆ.

**ಪ್ರಸ್ತಾವನೆ**

ಸಾಹಿತ್ಯ ಶಿಕ್ಷಣ ರೈತ ಸಂಘಟನೆ ಪತ್ರಿಕೋದ್ಯಮ ಸಮಾಜ ಸೇವೆ ಹಾಗೂ ವಿಧಾಯಕ ಕಾರ್ಯಗಳ ಮೂಲಕ ಜನಸೇವೆಯನ್ನು ಜನಜಾಗೃತಿಯನ್ನು ಪ್ರಮುಖವಾಗಿಟ್ಟುಕೊಂಡು ನಾಡು-ನುಡಿಗಾಗಿ ತಮ್ಮನ್ನು ಅರ್ಪಿಸಿಕೊಂಡರು. ದಿನಕರ ದೇಸಾಯಿಯವರ ಬದುಕು ಮಹತ್ವಪೂರ್ಣವಾದದ್ದು. ನಿಷ್ಠೆ ಪ್ರಾಮಾಣಿಕತೆ ಆದರ್ಶ ಮುಂತಾದ ಶಬ್ದಗಳು ಕೇವಲ ಅರ್ಥಕೋಶದಲ್ಲಿ ಮಾತ್ರ ಉಳಿದು ಕೊಳ್ಳುತ್ತಿರುವ ಇಂದಿನ ಸಂದರ್ಭದಲ್ಲಿ ಆ ಶಬ್ದಗಳಿಗೆ ಮತ್ತೆ ಜೀವದಾನ ಮಾಡಿದರು.

ದಿನಕರ ದೇಸಾಯಿಯವರ ವ್ಯಕ್ತಿತ್ವ ಬಹಳ ದೊಡ್ಡದು ನಮ್ಮಲ್ಲಿ ಹೆಸರಾದ ಸಾಹಿತಿಗಳಿದ್ದಾರೆ ನುರಿತ ಸಾಮಾಜಿಕ ಕಾರ್ಯಕರ್ತರಿದ್ದಾರೆ ಅನುಭವಿ ರಾಜಕಾರಣಿ ಇದ್ದರೆ ಗಟ್ಟಿ ಗಳಿಸಿದ ಶಿಕ್ಷಣ ಸಂಸ್ಥೆಗಳ ಸಂಘಟಿಸಿದ್ದಾರೆ ಕಾರ್ಮಿಕರಿದ್ದಾರೆ ನಿರ್ಧಾಕ್ಷಣ್ಯ ಮನೋಭಾವದ ಪತ್ರಕರ್ತರಿದ್ದಾರೆ, ಒಂದೊಂದು ಕ್ಷೇತ್ರದಲ್ಲಿ ಹೆಸರು ಗಳಿಸುವಂತೆ ಕೆಲಸ ಮಾಡುವುದು ಸುಲಭದ ಸಂಗತಿಯಲ್ಲ ಅಂದಮೇಲೆ ಎಲ್ಲಾ ಕ್ಷೇತ್ರಗಳಲ್ಲೂ ಏಕಪ್ರಕಾರದ ಸಾಧನೆ ತೋರಿಸಿದ ವ್ಯಕ್ತಿ ತೀರ ಅಪರೂಪ ಆದರೆ ದಿನಕರ ದೇಸಾಯಿ ಅಪರೂಪದ ವ್ಯಕ್ತಿತ್ವವನ್ನು ನೆರೆದವರಲ್ಲಿ ಒಬ್ಬರು ಅವರದು ಬಹುಮುಖ ವ್ಯಕ್ತಿತ್ವ ಅಸಾಧಾರಣ ಪ್ರತಿಭೆ ಅದ್ಭುತ ಸಂಘಟನಾ ಶಕ್ತಿ ಎಂದು ದಿನಕರರು ದಿವಂಗತರಾದ ಸಂದರ್ಭದಲ್ಲಿ ಪ್ರಕಟಗೊಂಡ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಸಂಪಾದಕೀಯ ವಿಭಾಗದಲ್ಲಿ ಬರೆದ ಮಾತು ಇಲ್ಲಿ ಗಮನಾರ್ಹ.

ಮೇಲೆ ಉಲ್ಲೇಖಿಸಿದ ಒಂದೊಂದು ಕ್ಷೇತ್ರದಲ್ಲಿ ಒಬ್ಬ ವ್ಯಕ್ತಿ ಮಾಡುವ ಕೆಲಸವನ್ನು ಮಾಡಿ ತೋರಿಸಿದ್ದಾರೆ ದಿನಕರ ದೇಸಾಯಿಯವರ ಮತ್ತೊಬ್ಬರಿಗೆ ಸ್ಪೂರ್ತಿನೀಡುವ ಚೈತನ್ಯಶೀಲ ವ್ಯಕ್ತಿತ್ವ.

ಇಂದಿನ ದಿನದಲ್ಲಿ ಬದುಕು ದಿನದಿಂದ ದಿನಕ್ಕೆ ಸಂಕೀರ್ಣವಾಗುತ್ತಾ ಹೋಗಿದೆ ಹಲವಾರು ಆತಂಕಗಳು ಸಂದರ್ಭಗಳು ಬಾಳದಾರಿಯಲ್ಲಿ ಬಂದು ನಿಂತು ವ್ಯಕ್ತಿಯನ್ನು ದಾರಿತಪ್ಪಿಸುವ ಸಂದರ್ಭಗಳೇ ಹೆಚ್ಚಾಗಿದೆ. ಇಂಥ ಸಂದಿಗ್ದ ಪರಿಸ್ಥಿತಿಯಲ್ಲಿ ಆತ್ಮವಿಶ್ವಾಸವನ್ನೇ ಮುಖ್ಯವಾಗಿಟ್ಟುಕೊಂಡು ಸಮಾಜದ ಜನರ ಹೊಗಳಿಕೆಗೆ – ತೆಗಳಿಕೆಗೆ ಕಿವಿಗೊಡದೆ ನಿರಂತರವಾಗಿ ವಿನಾಯಕ ಕಾರ್ಯವನ್ನು ಹಮ್ಮಿಕೊಳ್ಳುವ ಮೂಲಕ ಜನತೆಯ ನೆನಪಿನಂಗಳದಲ್ಲಿ ದೇಸಾಯಿಯವರು ಇನ್ನೂ ಜೀವಂತವಾಗಿದ್ದಾರೆ. ದಿನಕರ ದೇಸಾಯಿಯವರ ಬದುಕಿನ ಯಾವ ಘಟನೆಗಳು ನಡೆದಿಲ್ಲ. ನಿಯತ್ತಿನಿಂದ ಜೀವನ ನಡೆಸಿದ ಅವರು ತೆರೆದ ಪುಸ್ತಕದಂತಿದೆ. ಅವರ ವ್ಯಕ್ತಿತ್ವದ ಅವಿಭಾಜ್ಯ ಅಂಗವಾಗಿರುವ ಸಾಮಾಜಿಕ ಕಳಕಳಿ ಸಂಘಟನಾ ಶಕ್ತಿ ಸೇವಾಮನೋಭಾವ ಜನಪರ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಮುಂದಾಳುತನವನ್ನು ಒದಗಿಸಿಕೊಟ್ಟಿದೆ.

ಮಾನವನ ಬದುಕಿಗೆ ಒಂದು ನಿರ್ದಿಷ್ಟವಾದ ಮೌಲ್ಯ ಇಲ್ಲದೆ ಜೀವನದಲ್ಲಿ ಗೊತ್ತುಗುರಿಯಿಲ್ಲದೆ ಅತಂತ್ರವಾಗಿರುವ ಸಂದರ್ಭದಲ್ಲಿ ದೇಸಾಯಿ ಮತ್ತು ಬದುಕಿನ ಮೂಲಕವೇ ಜನರಿಗೆ ಸ್ಪೂರ್ತಿಯಾದರೂ. ದಿನಕರ ಬದುಕು-ಬರಹಗಳ ಹೊಸಬರಿಗೆ ಸ್ಪೂರ್ತಿಯಾಗುತ್ತದೆ ಕೇವಲ ಕನ್ನಡ ಸಾಹಿತ್ಯ ಅವರ ಜೀವನ ಹಾಗೂ ಕೃತಿಗಳ ಸ್ಥೂಲ ಸಮೀಕ್ಷೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವಿಸ್ಮರಣೀಯ. ಅವರ ಬದುಕಿನ ಸಾಧನೆ ಸಾಮಾನ್ಯರಿಗಿಂತ ಮಿಗಿಲಾದುದು, ದಿನಕರ ದೇಸಾಯಿ ಕೇವಲ ಒಂದು ವ್ಯಕ್ತಿಯಲ್ಲ ಒಂದು ಸಮರ್ಥ ಸಂಘಟನಾ ಶಕ್ತಿ. ದಿನಕರ ದೇಸಾಯಿಯವರ ಉಜ್ವಲ ವ್ಯಕ್ತಿತ್ವದ ನಿಸ್ಪೃಹ ವ್ಯಕ್ತಿ ನಮ್ಮ ನಡುವೆ ಬದುಕಿದ್ದರು ಎಂದು ಹೇಳಿಕೊಳ್ಳಲು ಅಭಿಮಾನ. ಮಾನವನ ಬದುಕಿಗೆ ಒಂದು ನಿರ್ದಿಷ್ಟವಾದ ಮೌಲ್ಯವೇ ಇಲ್ಲದೆ ಜೀವನದಲ್ಲಿ ಗೊತ್ತು ಗುರಿ ಇಲ್ಲದೆ ಬದುಕಲು ಸಾಧ್ಯವಿಲ್ಲ ದಿನಕರರ ಬದುಕು-ಬರಹಗಳ ಅಧ್ಯಯನ ಹೊಸ ಬದುಕನ್ನು ಹೊಸತನವನ್ನು ಹಂಬಲಿಸುವ ಜನರಿಗೆ ಸ್ಪೂರ್ತಿಯಾಗುತ್ತದೆ. ಕೇವಲ ಕನ್ನಡ ಸಾಹಿತಿಯಾಗಿ ಅವರ ಜೀವನ ಹಾಗೂ ಕೃತಿಗಳ ಸ್ಥೂಲ ಸಮೀಕ್ಷೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿರಮಿಸುವುದು. ಅವರ ಬದುಕಿನ ಸಾಧನೆ ಸಾಹಸಗಳು ಸಾಮಾನ್ಯ ವ್ಯಕ್ತಿಗಿಂತ ಮಿಗಿಲಾದುದು. ದಿನಕರ ದೇಸಾಯಿ ಕೇವಲ ಒಂದು ವ್ಯಕ್ತಿಯಲ್ಲ ಒಂದು ಸಮರ್ಥ ಸಂಘಟನಾ ಶಕ್ತಿ ದಿನಕರ ದೇಸಾಯಿಯವರ ಅಂತಹ ಉಜ್ವಲ ವ್ಯಕ್ತಿತ್ವದ ವ್ಯಕ್ತಿ ನಮ್ಮ ನಡುವೆ ಬದುಕಿದ್ದು ಎಂದು ಹೇಳಿಕೊಳ್ಳಲು

ಅಭಿಮಾನವೆನಿಸುತ್ತದೆ. ದಿನಕರ ದೇಸಾಯಿ ಕೇವಲ ಕರ್ನಾಟಕದ ಸ್ವತ್ತಲ್ಲ ಅವರು ಈ ದೇಶದ ಸ್ವತ್ತು. ದಿನಕರರವರ ರಾಷ್ಟ್ರವ್ಯಾಪಿ ವ್ಯಕ್ತಿತ್ವ.

## ದಿನಕರ ದೇಸಾಯಿ ಅವರ ಸಾಮಾಜಿಕ ಕೊಡುಗೆಗಳು

ದಿನಕರ ಎಂಬ ಹೆಸರು ಅವರ ಸಮಗ್ರ ಬದುಕಿನ ಅಧ್ಯಯನದ ಹಿನ್ನಲೆಯಲ್ಲಿ ದೇಸಾಯಿಯವರಿಗೆ ಅನ್ವರ್ಥಕ ವಾದದ್ದು ಮನದಟ್ಟಾಗುತ್ತದೆ. ಕಾಡಿನ ಜಿಲ್ಲೆಯೆಂದು ಹೆಸರಾದ ತೀರ ಹಿಂದುಳಿದ ಉತ್ತರ ಕನ್ನಡದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಪ್ರಗತಿಪರ ನಿಲುವಿನೊಂದಿಗೆ ಜನಜಾಗೃತಿಗೆ ಪ್ರೇರಕವಾದ ಜನಸೇವಕ, ಪತ್ರಿಕೆಯನ್ನು ಪ್ರಕಟಿಸಿದರು ಉತ್ತರ ಕನ್ನಡದ ಮಟ್ಟಿಗೆ ನೀಡಿದ ದಿನಕರ ಎನಿಸಿಕೊಂಡಿದ್ದಾರೆ. ತಮ್ಮ ವಿದ್ಯಾರ್ಥಿ ದೆಸೆಯಿಂದಲೂ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು ದಿನಕರರು ತಮ್ಮ ಕಾರ್ಯಕ್ಷೇತ್ರದಲ್ಲಿನ ಪ್ರಥಮ ದರ್ಜೆಯ ವ್ಯಕ್ತಿತ್ವವನ್ನು ಮೆರೆದಿದ್ದಾರೆ. ಕೃಷ್ಣ ಗೋಖಲೆಯವರು ಸ್ಥಾಪಿಸಿದ ಭಾರತೀಯ ಸಮಾಜದ ಸದಸ್ಯರಾಗಿದ್ದು ಜೀವನಕ್ಕೆ ತಮ್ಮನ್ನು ಅರ್ಪಿಸಿಕೊಂಡ ದಿನಕರರು ರಾಷ್ಟ್ರಮಟ್ಟದಲ್ಲಿ ಜನಸೇವೆಯನ್ನು ಕೈಗೊಂಡರು ತಾಯ್ನಾಡಿನಲ್ಲಿ ಜನ್ಮನೀಡಿದ ಜಿಲ್ಲೆಯನ್ನು ಸಂಘಟನೆಯ ಮೂಲಕ ರೈತರ ಕಟ್ಟಿ ನಿರ್ಮೂಲನೆಗಾಗಿ ಹೋರಾಡಿದರು. ಸಭೆಯಲ್ಲಿ ದಾಪುಗಾಲು ಹಾಕಿದ್ದಾರೆ. ರೈತ ಚಳುವಳಿಯ ನೆನಪು ಇಂದಿಗೂ ಅದರಲ್ಲಿ ಪಾಲ್ಗೊಂಡವರಿಗೆ ರೋಮಾಂಚಕಾರಿ ಅನುಭವ, ಜಿಲ್ಲೆಯ ಮೂಲೆ ಮೂಲೆಗಳಲ್ಲಿ ಸಂಚರಿಸಿ ತಮ್ಮ ಭಾಷಣದಿಂದ ಕಡಲತೀರದಲ್ಲಿ ದೇಸಾಯಿಯವರ ಸಿಂಹವಾಣಿ ಗಂಭೀರ ವ್ಯಕ್ತಿತ್ವದ ನೆನಪು ಮಾಡಿಕೊಳ್ಳಲು ಜಿಲ್ಲೆಯಲ್ಲಿ ಇನ್ನೂ ಇದ್ದಾರೆ. ಭ್ರಷ್ಟಾಚಾರದ ವಿರುದ್ಧ ಕರ್ನಾಟಕ ಏಕೀಕರಣದ ಜನಪರವಾದ ಹೋರಾಟಕ್ಕೆ ಚಾಲಕ ಶಕ್ತಿಯಾಗಿ ನಿಂತ ದೇಸಾಯಿಯವರು ಪಟ್ಟಭದ್ರ ಹಿತಾಸಕ್ತಿಯ ರಾಜಕಾರಣಿಗಳ ಎಲ್ಲಾ ದೃಷ್ಟಿಯಿಂದಲೂ ಸವಾಲಾಗಿದ್ದಾರೆ. ಕಾರ್ಮಿಕರ ಸಂಘಟನೆ.ಬರಪರಿಹಾರಕಾರ್ಯ.ಸಾಕ್ಷರತಾ ಆಂದೋಲನಗಳಲ್ಲಿ ಪ್ರಸಾರದ ಕ್ರಿಯಾಶೀಲ ಚಟುವಟಿಕೆಯಲ್ಲಿ ದಿನಕರರು ತಮ್ಮ ಸಾಮರ್ಥ್ಯವನ್ನು ಪ್ರಕಟಿಸಿದ್ದಾರೆ. ಮುಂಬಯಿ ನಗರ ಪಾಲಿಕೆಯ ಸದಸ್ಯರಾಗಿ ಅವರು ಮಾಡಿದ ಕಾರ್ಯಗಳು ಸ್ಮರಣೀಯ. ಅಂತರ್ ಸಂಬಂಧ ದಿನಕರ ದೇಸಾಯಿಯವರು ಕನ್ನಡನಾಡು ಕಂಡ ಧೀಮಂತ ಸೇವಕರು ಕನ್ನಡನಾಡಿನಲ್ಲಿ ಮಾತ್ರವಲ್ಲ ಹೊರಗೂ ಕೂಡ ಪ್ರಖ್ಯಾತರಾದವರು. ಅವರ ಕಾರ್ಯಕ್ಷೇತ್ರ ಇಡೀ ವಿಶ್ವವೇ ಆಗಿತ್ತು.

ಇಂತಹ ಬದುಕನ್ನು ಸಾಮಾಜಿಕ ಬದುಕನ್ನು ಹೇಳಲು ಸಾಧ್ಯವಿಲ್ಲ ಆದರೆ ಸಮಷ್ಟಿಯ ನೆಲೆಯಲ್ಲಿ ಬದುಕಿದ ಮಹಾನ್ ವ್ಯಕ್ತಿಗಳ ಸಾಮಾಜಿಕ ಬದ್ಧತೆ ಮತ್ತು ಹೊಣೆಗಾರಿಕೆಯ ಪರಿಯೇ ಬೇರೆ ಇಂಥವರ ಬದುಕು ಬರಿ ಜವಾಬ್ದಾರಿ ಮತ್ತು ಹೊಣೆಗಾರಿಕೆ ಅಷ್ಟೇ ಸೀಮಿತವಾಗಿರುವುದಿಲ್ಲ ಅವರಲ್ಲಿ ಚಿಂತನೆ ಮುಂದಾಲೋಚನೆ ಕ್ರಿಯಾಶೀಲತೆ ಸಮಾಜ ಸುಧಾರಣೆ ದೇಶಸೇವೆ ಜನಪರ ಕಾಳಜಿಗಳನ್ನು ಹೊಂದಿರುತ್ತಾರೆ ಹಿನ್ನೆಲೆಯಲ್ಲಿ ಶ್ರೇಷ್ಠ ಮಾನವತವಾದಿ ಸಾಹಿತ್ಯ ಮತ್ತು ಹೋರಾಟದ ಚಿಂತನ-ಮಂಥನ ವನ್ನು ಮಾಡಬೇಕು.

ಕರಾವಳಿಯ ಸೆರಗಿನಲ್ಲಿ ದೀನದಲಿತರ, ರೈತರ ಪಾಲಿಗೆ ಸೂರ್ಯನಂತೆ ಉದಯಿಸಿದ ಜನಸೇವಕ ಡಾ. ದಿನಕರ ದೇಸಾಯಿಯವರು ಇಂತಹ ಶ್ರೇಷ್ಠ ಬದುಕನ್ನು ಕಟ್ಟಿಕೊಂಡರು. ಕೇವಲ ಬದುಕಲಿಕ್ಕಾಗಿ ಬದುಕದೆ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಮಹಾನ್ ಚೇತನ ಅವರು. ಜೀವನದ ಉದ್ದಕ್ಕೂ ಅತ್ಯಂತ ದೊಡ್ಡ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸಿದವರು. ನುಡಿ ನಡೆಯ ನಡುವೆ ಇಟ್ಟುಕೊಳ್ಳದೆ ಬದುಕಿದ ದಿನಕರ ಉದಯವಾದದ್ದು ಅನುಕರಣೆಯಾಗಿದೆ.




ಸಾಮಾಜಿಕ ಬದುಕನ್ನು ವಿವಿಧ ಮಜಲುಗಳಲ್ಲಿ ಕಂಡು ಅಲ್ಲಿನ ಸಮಸ್ಯೆಗಳನ್ನು ಅರಿತು ಹೋರಾಟದ ಮತ್ತು ಬರಹದ ಮೂಲಕ ಸಂಸ್ಕೃತ ಗೊಳಿಸಲು ತಮ್ಮನ್ನು ಅರ್ಪಿಸಿಕೊಂಡವರು. ಅವರು ಆಡಿದ ಮಾತು

ಇಟ್ಟ ಹೆಜ್ಜೆ ನಡೆದ ಸಾಹಿತ್ಯವೂ ಇದಕ್ಕೆ ಜೀವಂತ ಸಂಗತಿಗಳಾಗಿದ್ದವು. ದಿನಕರ ದೇಸಾಯಿಯವರ ನಾ ಕಂಡ ಪಡುವಣ, ಮನೋಹರ ಗ್ರಂಥಮಾಲೆಯವರ ನಡೆದು ಬಂದ ದಾರಿಯ ಮೂರನೆಯ ಸಂಪುಟದಲ್ಲಿ ಅಚ್ಚಾಗಿದೆ. ದೇಸಾಯಿಯವರು ಭಾರತದ ಪ್ರತಿನಿದಿಯಾಗಿ ಅಂತಾರಾಷ್ಟ್ರೀಯ ಕೂಲಿಕಾರ ಪರಿಷತ್ತಿನಲ್ಲಿ ಭಾಗವಹಿಸಲು ಪ್ರವಾಸಮಾಡಿದಾಗಿನ ಅನುಭವಮಾಲಿಕೆಯೇ ಈ ಕೃತಿ. ಈ ಗ್ರಂಥದಲ್ಲಿ ದೇಸಾಯಿಯವರು ಕೂಲಿಕಾರರ ಸಂಘಟನೆ, ಸಾರಿಗೆ ವ್ಯವಸ್ಥೆ, ಶಿಸ್ತು, ಪಾಕಶಾಸ್ತ್ರ ಮುಂತಾದವುಗಳ ಬಗ್ಗೆ ಕಥೆಯ ರೀತಿಯಲ್ಲಿ ತಮ್ಮ ಅನುಭವಗಳನ್ನು ನೀಡಿದ್ದಾರೆ.

ಡಾ. ದಿನಕರ ದೇಸಾಯಿಯವರ ಬದುಕು-ಬರಹ ಹೋರಾಟಗಳ ಮಧ್ಯೆ ಅಂತರವಿಲ್ಲದೆ ಅವುಗಳಲ್ಲಿ ಅವಿನಾಭಾವ ಸಂಬಂಧವಿರುವುದನ್ನು ಅವರ ಕುರಿತು ಅಧ್ಯಯನದಿಂದ ವ್ಯಕ್ತವಾಗುವ ಜನಪರ ಕಾಳಜಿಗೆ ಹೋರಾಟವನ್ನು ತಮ್ಮ ಉಸಿರಾಗಿಸಿಕೊಂಡಿರುವ ಅವರ ಕಾರ್ಯಕ್ಷೇತ್ರ ಮೂಲಕ ಕಂಡುಬರುವ ಸಂಗತಿ ಸರ್ವರಿಗೂ ತಿಳಿದಿದೆ. ಜನಸೇವೆಯೇ ಜನಾರ್ದನ ಸೇವೆ ಎಂಬ ತತ್ವದಡಿಯಲ್ಲಿ ಅವರ ಹೋರಾಟದ ರೂಪುರೇಷೆಯನ್ನು ಶ್ರೀ ಸಾಮಾನ್ಯರ ಕಷ್ಟ ಸುಖ-ದುಃಖಗಳು ಯಾವುವು ಎಂಬುದನ್ನು ಅವರ ಹತ್ತಿರ ಹೋಗಿ ಅವರ ನಡುವೆ ಒಡನಾಟವನ್ನು ಹೊಂದಿದ್ದವರು. ಅವರ ಕಷ್ಟ-ಸುಖ ಸಮಸ್ಯೆ ಶೋಷಣೆಗಳನ್ನು ಅರಿತುಕೊಂಡು ಅವರ ವಿಮುಕ್ತಿಗಾಗಿ ತವಕಿಸಿದ ಸಾಮಾಜಿಕ ಬದ್ಧತೆ ಇರುವ ನಾಯಕನಿಗೆ ಇಡೀ ಸಮಾಜ ನಮಿಸುವ ದಾಗಿದೆ.

ದಿನಕರ ದೇಸಾಯಿಯವರು ಕನ್ನಡನಾಡು ಕಂಡ ಒಬ್ಬ ಧೀಮಂತ ಜನಸೇವಕ ಮತ್ತು ಇವರು ಕನ್ನಡನಾಡಿನಲ್ಲಿ ಮಾತ್ರವಲ್ಲ ಹೊರಗೂ ಕೂಡ ಪ್ರಖ್ಯಾತರಾದವರು ಅವರ ಕಾರ್ಯಕ್ಷೇತ್ರ ಇಡಿ ವಿಶ್ವವೇ ಆಗಿತ್ತು. ಅವರು ವ್ಯಕ್ತಿ ಕೇಂದ್ರಿಕೃತವಾದ ಸ್ವಾರ್ಥದ ಬದುಕಾಗಿರಲಿಲ್ಲ ಸಾಮಾನ್ಯವಾಗಿ ಹುಟ್ಟಿ ಬೆಳೆದು ತನಗಾಗಿ ತನ್ನ ಸಂಸಾರಕ್ಕಾಗಿ ಬದುಕಿದರೆ ಹೊಣೆಗಾರಿಕೆ ಮುಗಿಯುತ್ತದೆ ಎಂದು ಬಯಸುತ್ತಾನೆ. ಅಂತಹ ಬದುಕನ್ನು ಸಾಮಾಜಿಕ ಬದುಕು ಎಂದು ಹೇಳಲು ಸಾಧ್ಯವಿಲ್ಲ. ಅವರ ಸಾಹಿತ್ಯ ಮತ್ತು ಹೋರಾಟದ ಚಿಂತನ-ಮಂಥನ ವನ್ನು ಮಾಡಬೇಕು. ದಿನಕರ ದೇಸಾಯಿಯವರು ಬದುಕನ್ನು ಶ್ರಮಿಸಿ ಕಟ್ಟಿಕೊಂಡರು. ಕೇವಲ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಮಹಾನ್ ಚೇತನ ಜೀವನದ ಉದ್ದಕ್ಕೂ ಅತ್ಯಂತ ದೊಡ್ಡ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸಿದವರು. ನೋಡಿ ನಡೆದುಕೊಳ್ಳದೆ ಬಾಳಿ ಬದುಕಿದ ದಿನಗಳು ಆದರ್ಶ ಪ್ರಾಯವಾದದ್ದು. ಸಾಮಾಜಿಕ ಬದುಕನ್ನು ವಿವಿಧ ಮಜಲುಗಳಲ್ಲಿ ಕಂಡುಕೊಂಡು ಅಲ್ಲಿನ ಸಮಸ್ಯೆಗಳನ್ನು ಅರಿತು ಹೋರಾಟದ ಮೂಲಕ ಸಂಸ್ಕೃತ ಗೊಳಿಸಲು ತಮ್ಮನ್ನು ಅರ್ಪಿಸಿಕೊಂಡವರು ಅವರು ಆಡಿದ ಮಾತು ಇಟ್ಟ ಹೆಜ್ಜೆ ನಡೆಸಿದ ಬದುಕು ಬರೆದ ಸಾಹಿತ್ಯ ಎಲ್ಲವೂ ಅವರು ಬದುಕಿದ್ದ ಕಾಲದ ಜೀವಂತ ಸಂಗತಿಗಳಾಗಿದ್ದವು.

ಸಮಾಜದ ಆಧಾರವಾದ ರೈತರ ಬದುಕುವುದನ್ನು ದೇಸಾಯಿಯವರು ಅವರ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ ಏಕೆಂದರೆ ಸಮಾಜದ ಬಹುಪಾಲು ಸಮಸ್ಯೆಗೆ ಕಾರಣ ಅನ್ನವನ್ನು ನೀಡುವ ರೈತನ ಬದುಕು ಅದರ ಪರಿಣಾಮ ಸಮಾಜದ ಮೇಲೆ ಆಗುತ್ತದೆಂಬ ದೇಸಾಯಿಯವರ ಅಭಿಪ್ರಾಯ. ಏಕೆಂದರೆ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಶ್ರಮ ಸಂಸ್ಕೃತಿಯನ್ನು ನಾವು ಪ್ರಮುಖವಾಗಿ ಹೆಸರಿಸಬಹುದಾದ ಕವಿಗಳಲ್ಲಿ ಕುವೆಂಪು ಮತ್ತು ದೇಸಾಯಿಯವರು ಮುಖ್ಯವಾಗಿ ನಿಲ್ಲುತ್ತಾರೆ. ನನ್ನ ದೃಷ್ಟಿಯಲ್ಲಿ ಇಬ್ಬರು ಜಮೀನ್ದಾರ ಕುಟುಂಬದಲ್ಲಿ ಜನಿಸಿದವರು.

## ದಿನಕರ ದೇಸಾಯಿಯವರ ಶಿಕ್ಷಣ

ದಿನಕರ್ ದೇಸಾಯಿಯವರ ತನ್ನ ಬಾಲ್ಯವನ್ನು ಅಂಕೋಲಾ ಬಳಿಯ ಒಂದು ಸಣ್ಣ ಹಳ್ಳಿಯಾದ ಅಲಗೇರಿಯಲ್ಲಿ ಕಳೆದರು, ಅಲ್ಲಿ ಅವರ ತಂದೆ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಅವರು ಕೆಲಸ ಮಾಡುತ್ತಿದ್ದ ಅದೇ ಶಾಲೆಯಲ್ಲಿ ನಾಲ್ಕು ವರ್ಷಗಳ ಕಾಲ ಪ್ರಾಥಮಿಕ ಶಿಕ್ಷಣವನ್ನು ಹೊಂದಿದ್ದರು. ದಿನಕರ್ ಅವರು ಅಂಕೋಲಾದ ಎಡ್ವರ್ಡ್ ಪ್ರೌ ಖಿಛಿಥಿಂಂಟ ಶಾಲೆಯಲ್ಲಿ ಶಿಕ್ಷಣವನ್ನು ಮುಂದುವರೆಸಿದರು (ತರುವಾಯ ಜೈ ಹಿಂದ್ ಪ್ರೌ ಖಿಛಿಥಿಂಂಟ ಶಾಲೆ ಎಂದು ಮರುನಾಮಕರಣ ಮಾಡಲಾಯಿತು). ಕಾರ್ವಾರ್ (ಉತ್ತರ ಕನ್ನಡ ಜಿಲ್ಲೆಯ ಪ್ರಧಾನ ಕಚೇರಿ ಯ ಸರ್ಕಾರಿ ಪ್ರೌ ಖಿಛಿಥಿಂಂಟ ಶಾಲೆಯಲ್ಲಿ ಮೆಟ್ರಿಕ್ಯುಲೇಷನ್ ಉತ್ತೀರ್ಣರಾಗಿ ಉನ್ನತ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿದರು. ಅವರು ಬೆಂಗಳೂರಿನಲ್ಲಿ ಇಂಟರ್ಮೀಡಿಯೆಟ್ ಕೋರ್ಸ್ಗೆ ಸೇರಿದರು ಮತ್ತು ಮೈಸೂರಿನಲ್ಲಿ ಪದವಿ

ಕೋರ್ಸ್ ಅನ್ನು ಮುಂದುವರಿಸಿದರು, 1931 ರಲ್ಲಿ ಪ್ರಥಮ ದರ್ಜೆಯಲ್ಲಿ ಬಿ.ಎ. ಅವರು ಕ್ಯಾಂಡಿ ಪ್ರಶಸ್ತಿ ಪಡೆದರು. ಸ್ನಾತಕೋತ್ತರ ಕೋರ್ಸ್ ಮಾಡಲು ಮುಂಬೈಗೆ ತೆರಳಿದರು. ಅವರು ಸೇಂಟ್ ಕ್ಸೇವಿಯರ್ಸ್ ಕಾಲೇಜಿನಲ್ಲಿ ಸೇರಿಕೊಂಡರು, ಅಲ್ಲಿ ಅವರು 1933 ರಲ್ಲಿ ಪ್ರಥಮ ದರ್ಜೆಯಲ್ಲಿ ಎಂ.ಎ ಮುಗಿಸಿದರು – "ಕಲ್ಯಾಣಿಯ ಚಾಲುಕ್ಯರ ಅಡಿಯಲ್ಲಿ ಮಹಾಮಂಡಲೇಶ್ವರರು" ಎಂಬ ಪ್ರಬಂಧವನ್ನು ಮಂಡಿಸಿದರು. ಪ್ರಬಂಧವನ್ನು ಸಿದ್ಧಪಡಿಸುವಾಗ ಅವರು ಪ್ರಸಿದ್ಧ ಇತಿಹಾಸ ಪ್ರಾಧ್ಯಾಪಕ ಫಾದರ್ ಹೆರಾಸ್ ಅವರ ಮಾರ್ಗದರ್ಶನ ಹೊಂದಿದ್ದರು. ಅವರು ಸೇಂಟ್ ಜೇವಿಯರ್ ಬೆಳ್ಳಿ ಪದಕ ಗೆದ್ದರು. ಎಂ.ಎ.ಗೆ ಪ್ರಬಂಧಕ್ಕೆ ಸಿದ್ಧತೆ ನಡೆಸುತ್ತಿರುವಾಗ ಮುಂಬೈನ ಕಾನೂನು ಕಾಲೇಜಿನಲ್ಲಿ ಓದುತ್ತಿದ್ದರು. ಅವರು 1934 ರಲ್ಲಿ ಎಲ್ ಎಲ್ ಬಿ ಯನ್ನು ಪೂರ್ಣಗೊಳಿಸಿದರು.

### ಸಾಮಾಜಿಕ ಸೇವೆ

ದಿನಕರ್ ಕಾನೂನು ಅಭ್ಯಾಸದ ಬಗ್ಗೆ ಯೋಚಿಸಿದ್ದರು. ಈ ಆಲೋಚನೆ ಹೆಚ್ಚು ಕಾಲ ಉಳಿಯಲಿಲ್ಲ. ಜೀವ ಸದಸ್ಯತ್ವಕ್ಕಾಗಿ ಅರ್ಜಿಗಳನ್ನು ಆಹ್ವಾನಿಸುವ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಜಾಹೀರಾತು ಅವರ ಜೀವನದ ಹಾದಿಯನ್ನು ಬದಲಾಯಿಸಿತು. ಅವರು ಸಾಮಾಜಿಕ ಸೇವೆಗಾಗಿ ಜೀವನವನ್ನು ಮೀಸಲಿಡಲು ನಿರ್ಧರಿಸಿದರು, ಮತ್ತು ಸದಸ್ಯತ್ವಕ್ಕಾಗಿ ಅರ್ಜಿ ಸಲ್ಲಿಸಿದರು. ಅವರು 1935 ರಲ್ಲಿ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಮುಂಬೈ ಕಚೇರಿಯಲ್ಲಿ ಆಯ್ಕೆಯಾದರು ಮತ್ತು ಸದಸ್ಯರಾಗಿ ಸೇರಿಕೊಂಡರು. ಅವರು ಪ್ರಖ್ಯಾತ ಸಮಾಜವಾದಿ ನಾಯಕ ಶ್ರೀ ಎಸ್.ಎಂ.ಜೋಶಿ ಅವರ ಮಾರ್ಗದರ್ಶನದಲ್ಲಿ ತಮ್ಮ ವೃತ್ತಿಜೀವನವನ್ನು ರೂಪಿಸಿಕೊಂಡರು; ಸೇವೆಗೆ ಸಮರ್ಪಣೆಯೊಂದಿಗೆ ಅವರು ಜೀವನ ಸದಸ್ಯರಾಗಿ ಮತ್ತು ಸೊಸೈಟಿಯ ಮುಂಬೈ ಕಚೇರಿಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು. ಹಿಂದಿನ ಬಾಂಬೆ ಪ್ರಾಂತ್ಯದ ಬಿಜಾಪುರ ಜಿಲ್ಲೆಯು 1936 ರಿಂದ 1938 ಮತ್ತು 1940 ರಿಂದ 1942 ರ ಅವಧಿಯಲ್ಲಿ ಬರಗಾಲವನ್ನು ಎದುರಿಸಿತು. 1942 ರ ಡಿಸೆಂಬರ್ 8 ರಂದು ಸರ್ಕಾರವು ಬಿಜಾಪುರವನ್ನು ಬರಗಾಲ ಪೀಡಿತ ಜಿಲ್ಲೆ ಎಂದು ಘೋಷಿಸಿತು. ಪರಿಸ್ಥಿತಿಯನ್ನು ನಿರ್ಣಯಿಸಲು ಸೇವಕರು ಆಫ್ ಇಂಡಿಯಾ ಸೊಸೈಟಿ ದಿನಕರ್ ದೇಸಾಯಿ ಅವರನ್ನು ಬಿಜಾಪುರ ಜಿಲ್ಲೆಗೆ ನಿಯೋಜಿಸಿತು. ಅವರ ಸಮಗ್ರ ವರದಿಯ ಆಧಾರದ ಮೇಲೆ, ಸೇವಕರು ಆಫ್ ಇಂಡಿಯಾ ಸೊಸೈಟಿ ದಿನಕರ್ ದೇಸಾಯಿ ಅವರೊಂದಿಗೆ ಸದಸ್ಯ-ಕಾರ್ಯದರ್ಶಿಯಾಗಿ ಸಮಿತಿಯನ್ನು ರಚಿಸಿತು. ಸಮಿತಿಯು ಜಿಲ್ಲೆಯಲ್ಲಿ ವ್ಯಾಪಕವಾಗಿ ಪ್ರವಾಸ ಮಾಡಿತು ಮತ್ತು ಬರಗಾಲದಿಂದ ಬಳಲುತ್ತಿರುವ ಜನರಿಗೆ ಪರಿಹಾರ ನೀಡಲು ಸಾಧ್ಯವಾಯಿತು.

### ದಿನಕರ ದೇಸಾಯಿಯವರ ಸಾಹಿತ್ಯದಲ್ಲಿ ಸಾಮಾಜಿಕ ಸಂವೇದನೆ

ದಿನಕರ್ ದೇಸಾಯಿ ಅವರಿಗೆ ಕನ್ನಡ ಭಾಷೆ ಮತ್ತು ಜನರ ಮೇಲೆ ಅಪಾರ ಪ್ರೀತಿ ಇತ್ತು. ಅವರು ರಾಜ್ಯಗಳ ಮರು-ಸಂಘಟನಾ ಸಮಿತಿಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದಾರೆ. ಸಮಿತಿಯ ಸಂಘಟಿತ ಪ್ರಯತ್ನದಿಂದ, ಕನ್ನಡ ಭಾಷೆಯನ್ನು ಮಾತನಾಡುವ ಎಲ್ಲ ಜನರನ್ನು ಒಟ್ಟುಗೂಡಿಸುವ ಮೂಲಕ ಕರ್ನಾಟಕದ ಹೊಸ ರಾಜ್ಯವನ್ನು ಹೊಂದಲು ಸಾಧ್ಯವಾಯಿತು. ಕನ್ನಡದಲ್ಲಿ ನಾಲ್ಕು ಸಾಲುಗಳ ಚುಟುಕುಗಳನ್ನು ಜನಪ್ರಿಯ ಗೊಳಿಸಿದ ದಿನಕರ ದತ್ತಾತ್ರೇಯ ದೇಸಾಯಿಯವರನ್ನು ಕನ್ನಡಿಗರು 'ಚುಟುಕು ಬ್ರಹ್ಮ' ಎಂದೇ ಗುರುತಿಸುತ್ತಾರೆ. ಹಾಗಿದ್ದರೂ ಸಹ, 'ಚುಟುಕು' ಇದು ಅವರ ಪ್ರತಿಭೆಯ ಹಾಗು ಸಾಧನೆಯ ಒಂದು ಅತಿ ಸಣ್ಣ ಅಂಶ ಮಾತ್ರವಾಗಿದೆ.

ದಿನಕರ ದೇಸಾಯಿಯವರಿಗೆ 'ದಿನಕರನ ಚೌಪದಿ' ಕವನಸಂಕಲನಕ್ಕಾಗಿ ಕನ್ನಡ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ಆದರೆ ದೇಸಾಯಿಯವರು ಸಾಹಿತ್ಯದ ದಂತಗೋಪುರದಲ್ಲಿ ಬದುಕಲಿಲ್ಲ, ಮುಂಬಯಿಯಲ್ಲಿ ಅವರಿಗೆ ಕಾರ್ಮಿಕ ಸಂಘಟನೆಗಳ ಮುಖಂಡರೊಡನೆ ಲಭಿಸಿದ ಸಂಪರ್ಕದಿಂದಾಗಿ ದೇಸಾಯಿಯವರು ತಮ್ಮ ಜೀವನವನ್ನೆಲ್ಲ ಶೋಷಿತವರ್ಗಗಳ ಪರವಾದ ಹೋರಾಟಕ್ಕೆ ಮುಡುಪಿಟ್ಟರು. ಗೋಕಾಕದ ಹತ್ತಿ ಗಿರಣಿಯ ಕಾರ್ಮಿಕರ ಪರವಾಗಿ ಅವರ ಹೋರಾಟದ ಜೀವನ ಪ್ರಾರಂಭವಾಯಿತು. ಬಳಿಕ ಮುಂಬಯಿಯಲ್ಲಿ ಕಡಲಕಾರ್ಮಿಕರ ಸಂಘಟನೆಯಲ್ಲಿ ಅವರು ತಮ್ಮನ್ನು

ತೊಡಗಿಸಿಕೊಂಡರು. ತಮ್ಮ ಪ್ರತಿಭಾವಂತ ಮಗನು ಸರಕಾರದ ಉನ್ನತ ಹುದ್ದೆಯನ್ನು ಅಲಂಕರಿಸುತ್ತಾನೆಂದು ಹಾರೈಸುತ್ತ ಕುಳಿತಿದ್ದ ಬಡ 'ದತ್ತಣ್ಣ ಮಾಸ್ತರ'ರಿಗೆ ಇದೊಂದು ನಿರಾಶಾದಾಯಕ ಸಂಗತಿಯಾಯಿತು. ದಿನಕರ ದೇಸಾಯಿಯವರು ಉತ್ತರ ಕನ್ನಡ ಜಿಲ್ಲೆಯವರಾದರೆ,ಇವರಂತೆಯೇ ಮುಂಬಯಿಯ ರೇಲ್ವೇ ಕಾರ್ಮಿಕರ ಸಂಘಟನೆಗಾಗಿ ದುಡಿದ ಜಾರ್ಜ ಫರ್ನಾಂಡಿಸರು ದಕ್ಷಿಣ ಕನ್ನಡ ಜಿಲ್ಲೆಯವರು ಎನ್ನುವದು ಗಮನಾರ್ಹವಾಗಿದೆ.

ದೇಸಾಯಿಯವರು ತಮ್ಮ ಸೇವಾಕ್ಷೇತ್ರವನ್ನು ಮುಂಬಯಿಗೆ ಮಾತ್ರ ಸೀಮಿತಗೊಳಿಸಲ್ಲ. ತಮ್ಮ ತವರುಜಿಲ್ಲೆಯಾದ ಉತ್ತರ ಕನ್ನಡ ಜಿಲ್ಲೆಯಲ್ಲಿ ಭೂಚಳುವಳಿಯನ್ನು ಪ್ರಾರಂಬಿಸಿ ಐದು ವರ್ಷ ಗಡಿಪಾರು ಶಿಕ್ಷೆಯನ್ನು ಅನುಭವಿಸಿದರು.ಹಾಲಕ್ಕಿ ಜನಾಂಗದ ಬಗೆಗೆ ಅಧ್ಯಯನವನ್ನು ಪ್ರಕಟಿಸಿ, ಆ ಜನಾಂಗವನ್ನು ಗಿರಿಜನ ಸಮುದಾಯವೆಂದು ಗುರುತಿಸಲು ದಿನಕರ ದೇಸಾಯಿಯವರೇ ಕಾರಣರು. ಉತ್ತರ ಕನ್ನಡ ಜಿಲ್ಲೆಯ ಶೈಕ್ಷಣಿಕ ಪ್ರಗತಿಗಾಗಿ, ವಿಶೇಷತಃ ಹಿಂದುಳಿದ ವರ್ಗಗಳ ಶೈಕ್ಷಣಿಕ ಪ್ರಗತಿಗಾಗಿ, 'ಕೆನರಾ ವೆಲ್‌ಫೇರ್ ಟ್ರಸ್ಟ' ಸ್ಥಾಪಿಸಿ ಶಾಲೆ ಹಾಗು ಕಾಲೇಜುಗಳನ್ನು ತೆರೆದರು. ಅನೇಕ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಸಹಾಯ ನೀಡಿದರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಶಿಕ್ಷಣದ ಜ್ಯೋತಿಯನ್ನು ಬೆಳಗಿದ ಶ್ರೇಯಸ್ಸು ದಿನಕರ ದೇಸಾಯಿಯವರಿಗೆ ಸಲ್ಲುತ್ತದೆ. ದಿನಕರ ದೇಸಾಯಿಯವರು ಗೋಪಾಲಕೃಷ್ಣ ಗೋಖಲೆಯವರಿಂದ ಮುಂಬಯಿಯಲ್ಲಿ ಸ್ಥಾಪಿತವಾದ 'ಭಾರತ ಸೇವಕ ಸಮಾಜ'ದ ಸದಸ್ಯರಾಗಿದ್ದರು. ಈ ಸಂಸ್ಥೆಯ ನಿಯಮಗಳ ಮೇರೆಗೆ ತಮಗೆ ಬಂದ ಯಾವುದೇ ಸಂಭಾವನೆಯನ್ನು ಸಂಸ್ಥೆಗೆ ಸಲ್ಲಿಸಿ, ಅತ್ಯಂತ ಕಡಿಮೆ ಖರ್ಚಿನಲ್ಲಿ ಜೀವನ ಸಾಗಿಸುತ್ತಿದ್ದರು. ತಾವು ಲೋಕಸಭಾ ಸದಸ್ಯರಾಗಿದ್ದಾಗ, ಆ ಪದನಿಮಿತ್ತ ಸಂಭಾವನೆಯನ್ನೂ ಸಹ ನೇರವಾಗಿ ಭಾರತ ಸೇವಕ ಸಮಾಜಕ್ಕೆ ಸಲ್ಲಿಸುತ್ತಿದ್ದರು. ಸ್ವಾಮಿ ವಿವೇಕಾನಂದರಂತೆ ಇವರೂ ಸಹ ದರಿದ್ರನಾರಾಯಣನಿಗೆ ಸಲ್ಲಿಸುವ ಸೇವೆಯೇ ನಿಜವಾದ ಹರಿಪೂಜೆ ಎಂದು ಭಾವಿಸಿದವರು. ಆ ಮನೋಭಾವವನ್ನು ಬಿಂಬಿಸುವ ಅವರ ಕವನ ಹೀಗಿದೆ:

ಹರಿಗೆ ಎಂದು ಗುಡಿಯನೊಂದು
ಕಟ್ಟುತಿರುವೆಯಾ?
ಹರಿಯ ಒಲುಮೆ ಪಡೆದು ಪುಣ್ಯ
ಗಳಿಸುತಿರುವೆಯಾ?

ಹುಚ್ಚ! ನೀನು ಹಳ್ಳಿಗೋಡು
ದೀನ ಜನರ ಪಾಡ ನೋಡು
ಇರಲು ಗುಡಿಯು ಇಲ್ಲವಲ್ಲ
ಹೊಟ್ಟೆ ತುಂಬ ಅನ್ನವಿಲ್ಲ!
ಹರಿಗೆ ಎಂದು ಗುಡಿಯನೊಂದು
ಕಟ್ಟುತಿರುವೆಯಾ?

ದೀನಗೊಂದು ಗೂಡು ಸಾಕು
ದೇವಗೊಂದು ವಿಶ್ವ ಬೇಕು
ಮಣ್ಣ ಹುಲ್ಲ ಸಣ್ಣ ಗೂಡು
ಬಡವಗದುವೆ ಸಿರಿಯ ಬೀಡು
ಹರಿಗೆ ಎಂದು ಗುಡಿಯನೊಂದು
ಕಟ್ಟುತಿರುವೆಯಾ?

ಜಗಕೆ ಗೋಡೆ ಹಾಕಿ ಗುಡಿಯ ಕಟ್ಟಬಲ್ಲೆಯಾ?
ಹರಿಗೆ ಎಂದು ಗುಡಿಯನೊಂದ
ಕಟ್ಟುತಿರುವೆಯಾ?

ಹರಿಯ ವಿಶ್ವರೂಪವನ್ನು ಮರೆತುಬಿಟ್ಟೆಯಾ?
ದೀನಗಿಂತ ದೇವ ಬಡವನೆಂದು ಬಗೆದೆಯಾ? ”

ದಿನಕರ ದೇಸಾಯಿಯವರು ಶೋಷಿತರ ಪರವಾಗಿ ಹೋರಾಡಿದವರು. ಆದರೆ ಅವರು ಮಾರ್ಕ್ಸವಾದಿಗಳಲ್ಲ ಹಾಗು ನಾಸ್ತಿಕರಲ್ಲ. ಅವರಿಗೆ ಹರಿಯಲ್ಲಿ ನಂಬುಗೆ ಇದೆ. ಹಾಗೆಂದು ಹರಿಪೂಜೆಗಾಗಿ ಸಮಯವನ್ನು 'ವ್ಯರ್ಥ' ಮಾಡುವವರಲ್ಲ. ಸಾಮಾಜಿಕ ಹೋರಾಟದಲ್ಲಿ ಇದ್ದವರಾದರೂ ಸಹ ರಾಜಕಾರಣಿಯಲ್ಲ. ಇವರು ಒಂದು ಅವಧಿಗಾಗಿ ಲೋಕಸಭಾ ಸದಸ್ಯರಾಗಿದ್ದರೂ ಸಹ ಯಾವುದೇ ರಾಜಕೀಯ ಪಕ್ಷದ ಸದಸ್ಯರಲ್ಲ. ಭಾರತ ಸೇವಕ ಸಮಾಜದ ನಿಯಮಗಳ ಮೇರೆಗೆ ಇವರು ರಾಜಕೀಯ ಪಕ್ಷಗಳನ್ನು ಸೇರುವಂತಿರಲಿಲ್ಲ. ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದಾಗ, ದಿನಕರ ದೇಸಾಯಿಯವರಿಗೆ ಮಂತ್ರಿ ಪದವಿಯನ್ನು ನೀಡಲು ಸಿದ್ಧರಿದ್ದರು. ಆದರೆ ತತ್ವನಿಷ್ಠರಾದ ದೇಸಾಯಿಯವರು ಆ ಆಮಿಷವನ್ನು ತಿರಸ್ಕರಿಸಿದರು.

ತಮ್ಮ ನಿಬಿಡ ಜನಸೇವಾ ಕಾರ್ಯಕ್ರಮಗಳ ನಡುವೆ ಇವರಿಗೆ ಸಾಹಿತ್ಯರಚನೆಗೆ ಸಮಯ ಸಿಕ್ಕುವದೇ ಅಪರೂಪವಾಗಿತ್ತು. ಹಾಗಿದ್ದರೂ ಸಹ ದಿನಕರ ದೇಸಾಯಿಯವರು 'ಜನಸೇವಕ' ಎನ್ನುವ

ಪತ್ರಿಕೆಯನ್ನು ನಡೆಯಿಸಿದರು. ಐದು ಕವನಸಂಕಲನಗಳನ್ನು ಹಾಗು 'ನಾ ಕಂಡ ಪಡುವಣ' ಎನ್ನುವ ಪ್ರವಾಸಸಾಹಿತ್ಯವನ್ನು ರಚಿಸಿದರು. ಈ ಪ್ರವಾಸಕಥನವು ಅವರ ಸೂಕ್ಷ್ಮ ಸಾಮಾಜಿಕ ಹಾಗು ರಾಜಕೀಯ ಒಳನೋಟವನ್ನು ಪ್ರತಿಬಿಂಬಿಸುತ್ತದೆ. ಇವನ್ನೆಲ್ಲ ಗಮನಿಸಿದಾಗ ಸಮಯದ ಅಭಾವದ ಮೂಲಕ ದಿನಕರ ದೇಸಾಯಿಯವರು ಬಹುಶಃ ಚುಟುಕುಗಳ ಕಡೆಗೆ ಒಲಿದಿರಬಹುದು ಎನ್ನಿಸುತ್ತದೆ.

"ಹರಿಗೆ ಎಂದು ಗುಡಿಯನೊಂದು ಕಟ್ಟುತಿರುವೆಯಾ"? ಕವನವು ದಿನಕರ ದೇಸಾಯಿಯವರ ಸಾಮಾಜಿಕ ಸಂವೇದನೆಯನ್ನು ವ್ಯಕ್ತ ಪಡಿಸುತ್ತದೆ. ಈ ಕವನಕ್ಕೆ ಪ್ರತಿಯಾಗಿ ಪು.ತಿ. ನರಸಿಂಹಾಚಾರ್ಯರು ಒಂದು ಕವನವನ್ನು ರಚಿಸಿದ್ದಾರೆ ಎಂದು ಶ್ರೀ ವ್ಯಾಸ ದೇಶಪಾಂಡೆಯವರು ನನಗೆ ತಿಳಿಸಿದಾಗ ನಾನು ಚಕಿತನಾದೆ. ಅದ್ಭುತ ಸ್ಮರಣಶಕ್ತಿಯ ಶ್ರೀ ವ್ಯಾಸ ದೇಶಪಾಂಡೆಯವರು ಆ ಕವನವನ್ನು ತಮ್ಮ ನೆನಪಿನಿಂದಲೇ ನನಗೆ ಹೇಳಿದರು. ಅದನ್ನೇ ನಾನು ಇಲ್ಲಿ ಉದ್ಧರಿಸುತ್ತಿದ್ದೇನೆ:

ಹರಿಗೆ ಎಂದು ಗುಡಿಯನೊಂದು ಕಟ್ಟುತಿರುವೆನು
ದೀನನಿಗಿಂತ ದೇವ ಬಡವನೆಂದು ಬಗೆವೆನು.
ನಿಜವು ವಿಷ್ಣು ವಿಶ್ವಕರನು, ವಿಶ್ವಧಾಮನು
ಒಂದೆ ಹೆಜ್ಜೆ ಇಟ್ಟು ಬುವಿಯ ನಾಕವಳೆದನು
ಬೆಳ್ಳಿಬೆಟ್ಟದೊಡೆಯ ಶಿವನು ಚಂದ್ರಮೌಳಿಯು
ಪ್ರೇಮಮೂರ್ತಿ ಗಿರಿಜೆ ಅವನ ಪ್ರಣಯಕಾರ್ತೆಯು
ಆದರವನ ಬೀಡು ಮಸಣ, ಲೇಪ ಬೂದಿಯು
ಚರ್ಮ ಉಡುಗೆ, ಹಾವು ತೊಡುಗೆ,
ಬದುಕು ಬಿಕ್ಕೆಯು
ದೀನಗೊಂದು ವಿಶ್ವ ಸಾಲದಾಸೆ ತಣಿಸಲು
ದೇವನೆದೆಯ ಗುಡಿಯು ಸಾಕು ನಲಿದು ನಲಿಸಲು"

ದಿನಕರ ದೇಸಾಯಿಯವರ ಕವನಕ್ಕೆ ಸಾಮಾಜಿಕ ಪ್ರೇರಣೆ ಇದ್ದರೆ, ಪು.ತಿ. ನ. ಅವರ ಕವನಕ್ಕೆ ಆಧ್ಯಾತ್ಮಿಕ ಪ್ರೇರಣೆ ಇದೆ. 'ಅವರವರ ಭಾವಕ್ಕೆ, ಅವರವರ ಭಕುತಿಗೆ, ಅವರವರ ತೆರನಾಗಿ ಇರುತಿಹನು ಶಿವಯೋಗಿ' ಎಂದುಕೊಳ್ಳಬಹುದಷ್ಟೆ! ದಿನಕರ ದೇಸಾಯಿಯವರ ಮೂರು ಕವನಗಳು ನನ್ನ ಅಚ್ಚುಮೆಚ್ಚಿನ ಕವನಗಳು. 'ಹರಿಗೆ ಎಂದು ಗುಡಿಯನೊಂದು ಕಟ್ಟುತಿರುವೆಯಾ?' ಕವನವು ಅವುಗಳಲ್ಲೊಂದು. 'ನನ್ನ ದೇಹದ ಬೂದಿ ಗಾಳಿಯಲಿ ತೂರಿ ಬಿಡಿ' ಎನ್ನುವದು ಮತ್ತೊಂದು ಕವನ. ಈ ಕವನ ಹೀಗಿದೆ:

ನನ್ನ ದೇಹದ ಬೂದಿ-ಗಾಳಿಯಲಿ ತೂರಿ ಬಿಡಿ
ಹೋಗಿ ಬೀಳಲಿ ಬತ್ತ ಬೆಳೆಯುವಲ್ಲಿ;
ಬೂದಿ-ಗೊಬ್ಬರದಿಂದ ತೆನೆಯೊಂದು ನೆಗೆದು ಬರೆ
ಧನ್ಯವಾಯಿತು ಹುಟ್ಟು ಸಾವಿನಲ್ಲಿ
ನನ್ನ ದೇಹದ ಬೂದಿ-ಹೊಳೆಯಲ್ಲಿ ಹರಿಯಬಿಡಿ
ತೇಲಿ ಬೀಳಲಿ ಮೀನು ಹಿಡಿಯುವಲ್ಲಿ;
ಮುಷ್ಟಿಬೂದಿಯ ತಿಂದು ಪುಷ್ಟವಾಗಲು ಮೀನು
ಧನ್ಯವಾಯಿತು ಹುಟ್ಟು ಸಾವಿನಲ್ಲಿ
ನನ್ನ ದೇಹದ ಬೂದಿ-ಕೊಳದಲ್ಲಿ ಬೀರಿ ಬಿಡಿ
ತಾವರೆಯು ದಿನದಿನವು ಅರಳುವಲ್ಲಿ;
ಬೂದಿ ಕೆಸರನು ಕೂಡಿ ಹೊಸ ಪಂಕಜವುಮೂಡೆ
ಧನ್ಯವಾಯಿತು ಹುಟ್ಟು ಸಾವಿನಲ್ಲಿ
ಸತ್ತ ಮೇಲಾದರೂ ದೇಹ ಸೇವೆಗೆ ನಿಲಲಿ
ಇಂದಿಗೀ ನರಜನ್ಮ ಸೇವೆಯಿಂದು
ತನ್ನ ಸ್ವಾರ್ಥವ ನೆನೆದು ವ್ಯರ್ಥವಾಗಿದೆ, ದೇವ,
ನಿಜ ಸೇವೆಗೈಯಲಿಕೆ ಬರಲಿ ಮುಂದು.

ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ ನೆಹರೂರವರು ಸಹ ತಮ್ಮ ಮೃತ್ಯುಪತ್ರದಲ್ಲಿ ತಮ್ಮ ದೇಹದ ಬೂದಿಯನ್ನು ಭಾರತದ ವಿವಿಧ ಪ್ರದೇಶಗಳಲ್ಲಿ ಹಾಗು ನದಿಗಳಲ್ಲಿ ತೂರಿ ಬಿಡಲು ಬರೆದಿದ್ದಾರೆ. ನೆಹರೂರವರು ತಮ್ಮ ಮೃತ್ಯುಪತ್ರವನ್ನು ೧೯೪೮ ರಲ್ಲಿಯೇ ಬರೆದಿದ್ದರೂ ಸಹ, ಅವರ ಮರಣದ ನಂತರ ಅಂದರೆ ೧೯೬೨ ರಲ್ಲಿ ಅದು ಪ್ರಕಟವಾಯಿತು. ದಿನಕರ ದೇಸಾಯಿಯವರು ತಮ್ಮ ಈ ಕವನವನ್ನು ೧೯೬೨ಕ್ಕಿಂತ ಮೊದಲೇ ಬರೆದಿದ್ದಾರೆ. ನೆಹರೂರ ಇಚ್ಛೆಯು ಭಾವನಾತ್ಮಕವಾಗಿದೆ. ದಿನಕರ ದೇಸಾಯಿಯವರ ಕವನದಲ್ಲಿ, ತನ್ನ ಬದುಕು ಹಾಗು ತನ್ನ ಸಾವು ಎರಡರಿಂದಲೂ ಈ ಜಗತ್ತಿಗೆ ಉಪಯೋಗವಾಗಲಿ ಎನ್ನುವ ತೀವ್ರ ಕಳಕಳಿಯಿದೆ. ದಿನಕರ ದೇಸಾಯಿಯವರು ೧೯೮೨ ನವ್ಹೆಂಬರ ೬ ರಂದು ತೀರಿಕೊಂಡರು. ಅವರ ಕವನದಲ್ಲಿಯ ಕೋರಿಕೆಯನ್ನು ಮನ್ನಿಸಲಾಯಿತೊ ಇಲ್ಲವೊ ತಿಳಿಯದು. ಆದರೆ ಕನ್ನಡನಾಡಿನ ಈ ಸುಪುತ್ರನ ಜನ್ಮವು ಜನಸೇವೆಯಲ್ಲಿ

ಸಾರ್ಥಕವಾಗಿರುವದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ.

ಇಂದಿರಾ ಇವರು ದಿನಕರ ದೇಸಾಯಿಯವರ ಹೆಂಡತಿ. ಈ ಮರಾಠಿ ತರುಣಿ ದೇಸಾಯಿಯವರನ್ನು ಮದುವೆಯಾಗುವ ಬಯಕೆಯನ್ನು ವ್ಯಕ್ತ ಪಡಿಸಿದಾಗ, ದೇಸಾಯಿಯವರು, 'ನನ್ನ ಅಂಗಿಗೆ ಜೇಬು ಇಲ್ಲ' ಎಂದು ಹೇಳಿದ್ದರು. 'ಅದಕ್ಕಾಗಿಯೇ ನಾನು ನಿಮ್ಮನ್ನು ಮದುವೆಯಾಗಲು ಬಯಸುವುದು' ಎಂದು ಇಂದಿರಾ ಮರುನುಡಿದರಂತೆ!

ದಿನಕರ ದೇಸಾಯಿಯವರ ನನ್ನ ಮೆಚ್ಚಿನ ಮೂರನೆಯ ಕವನ: 'ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್!' ಇದೊಂದು ಅದ್ಭುತ ಮಕ್ಕಳ ಗೀತೆ. ನಾನು ಕನ್ನಡ ಶಾಲೆಯಲ್ಲಿ ಕಲಿಯುತ್ತಿರುವಾಗ ಈ ಕವನ ನಮ್ಮ ಪಠ್ಯದಲ್ಲಿತ್ತು. ಕವನ ಹೀಗಿದೆ:-

ಗಂಟೆಯ ನೆಂಟನೆ ಓ ಗಡಿಯಾರ,
ಬೆಳ್ಳಿಯ ಬಣ್ಣದ ಗೋಲಾಕಾರ,
ವೇಳೆಯ ತಿಳಿಯಲು ನೀನಾಧಾರ,
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್!
ಹಗಲೂ ಇರುಳೂ ಒಂದೇ ಬಾಳು,
ನೀನಾವಾಗಲು ದುಡಿಯುವ ಆಳು,
ಕಿವಿಯನು ಹಿಂಡಲು ನಿನಗದು ಕೂಳು
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್!
ಮುಖ ಒಂದಾದರು ದ್ವಾದಶ ನೇತ್ರ!
ಎರಡೇ ಕೈಗಳು ಏನು ವಿಚಿತ್ರ!
ಯಂತ್ರ ಪುರಾಣದ ರಕ್ಕಸ ಪುತ್ರ!
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್!
ಟಿಕ್ ಟಿಕ್ ಎನ್ನುತ ಹೇಳುವೆಯೇನು?
ನಿನ್ನೀ ಮಾತಿನ ಒಳಗುಟ್ಟೇನು?
'ಕಾಲವು ನಿಲ್ಲದು' ಎನ್ನುವಿಯೇನು?
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್!
ದುಡಿಯುವದೊಂದೇ ನಿನ್ನಯ ಕರ್ಮ
ದುಡಿಸುವದೊಂದೇ ನಮ್ಮಯ ಧರ್ಮ
ಇಂತಿರುವುದು ಕಲಿಯುಗದೀ ಮರ್ಮ
ಟಿಕ್ ಟಿಕ್ ಗೆಳೆಯಾ, ಟಿಕ್ ಟಿಕ್ ಟಿಕ್!

ಈ ಬಾಲಗೀತೆಯಲ್ಲಿಯೂ ಸಹ ದಿನಕರ ದೇಸಾಯಿಯವರ ಶೋಷಿತಸಂವೇದನೆಯ ಸಮಾಜಮುಖೀ ಧೋರಣೆ ವ್ಯಕ್ತವಾಗುತ್ತಿದೆ! 'ನೀನಾವಾಗಲು ದುಡಿಯುವ ಆಳು' ಹಾಗು 'ಯಂತ್ರಪುರಾಣದ ರಕ್ಕಸಪುತ್ರ' ಎನ್ನುವ ಸಾಲುಗಳು ಈ ಧೋರಣೆಯನ್ನು ಸ್ಪಷ್ಟಪಡಿಸುತ್ತವೆ. ದಿನಕರ ದೇಸಾಯಿಯವರು ತಮ್ಮ ಜೀವನದ ಪ್ರತಿ ಗಳಿಗೆಯನ್ನು ಸಮಾಜಕ್ಕಾಗಿ ಮೀಸಲಿಟ್ಟಿದ್ದರು. ದೇವರಲ್ಲಿ ಅವರಿಗೆ ನಂಬುಗೆ ಇದ್ದರೆ, ಅದು ಅವರ ಅಂತರಂಗಕ್ಕೆ ಮಾತ್ರ ತಿಳಿದಿರಬಹುದು. ಮರಣಶಯ್ಯೆಯಲ್ಲಿದ್ದಾಗ ಅವರು ರಚಿಸಿದ ಚುಟುಕು ಹೀಗಿದೆ:

ಜಗದೀಶ್ವರನು ಮೊನ್ನೆ ಮಾಡಿ ಟೆಲಿಫೋನು
ಕೇಳಿದನು, 'ದೇಸಾಯಿ, ಹೇಗಿದ್ದಿ ನೀನು?'
ಮುಗಿಯಲಿಲ್ಲವೆ ನಿನ್ನ ಚುಟುಕುಗಳ ಹುಚ್ಚು
ಇನ್ನೆರಡು ಬರೆದು ನೀ ಪುಸ್ತಕವ ಮುಚ್ಚು!'

ದಿನಕರ ದೇಸಾಯಿಯವರು ತಮ್ಮ ಅಂತ್ಯವನ್ನು ಅರಿತಿರಬಹುದು. ಅದಕ್ಕೂ ಮುಖ್ಯವೆಂದರೆ, ತನ್ನನ್ನು ಹಿಡಿದುಕೊಂಡೇ ಯಾರೂ ಅಮರನಾಗಿರುವಷ್ಟು ಮುಖ್ಯ ಅಲ್ಲ ಎಂದು ಅವರು ಅರಿತಿರಬಹುದು. ಅಥವಾ ಒಂದು ಜ್ಯೋತಿ ನಂದಿದರೆ, ಅದು ಹೊತ್ತಿಸಿದ ನೂರು ಜ್ಯೋತಿಗಳು ಅಲ್ಲಿ ಬೆಳಗುತ್ತವೆ ಎನ್ನುವುದನ್ನು ಅವರು ಅರಿತಿರಬಹುದು. ಗೋಖಲೆ ಸೆಂಟೆನರಿ ಕಾಲೇಜಿನಲ್ಲಿ ಅವರ ಎದೆಯಳತೆಯ ಮೂರ್ತಿಯನ್ನು ಸ್ಥಾಪಿಸಲು ಅವರ ಶಿಷ್ಯರು ಬಯಸಿದ್ದರು. ಹಾಗೇನಾದರೂ ಮಾಡಿದರೆ ತಾನು ರಾಜೀನಾಮೆ ಕೊಡುವದಾಗಿ ದೇಸಾಯಿಯವರು ಬೆದರಿಕೆ ಹಾಕಿದರು. ದಿನಕರ ದೇಸಾಯಿಯವರ ನಿಧನದ ನಂತರ, ಅವರ ನೆನಪಿಗಾಗಿ ಎದೆಯಳತೆಯ ಪುತ್ಥಳಿಯೊಂದನ್ನು ಅಲ್ಲಿ ನಿಲ್ಲಿಸಲಾಗಿದೆ. ದಿನಕರ ದೇಸಾಯಿಯವರು ಶೋಷಿತರ ಹಾಗು ತಮ್ಮ ಅನೇಕ ಶಿಷ್ಯರ ಹೃದಯಗಳಲ್ಲಿ ನಿರಂತರವಾಗಿ ಬೆಳಗುತ್ತಿದ್ದಾರೆ.

## ಸಮಾರೋಪ

ತಾವು ಕೈಗೊಂಡ ಪ್ರತಿಯೊಂದು ಕಾರ್ಯದಲ್ಲಿ ಕಾರಣ ಅಚ್ಚುಕಟ್ಟುತನವನ್ನು ಸಾಧಿಸಿದ ತಮ್ಮ ಜೀವನದ ಕ್ರಮಬದ್ಧವಾದ ರೀತಿಯ ಮೂಲಕ ಇಂದಿನ ಹಾಗೂ ಮುಂದಿನ ಜನಾಂಗಕ್ಕೆ ಒಂದು ಮಾದರಿಯಾಗಿ, ಪ್ರೇರಣೆಯಾಗಿ ನಿಲ್ಲಬಲ್ಲ, ದಿನಕರ ದೇಸಾಯಿ ಅವರ ಬದುಕು ಸಮಾಜವನ್ನು ಜಾಗೃತಗೊಳಿಸುವ ಅವರು ಬೇರೆಯವರಿಗೆ ಆದರ್ಶವಾಗುವ ಅನುಕರಣೆಯಾಗುವ ಅವರ ಸಾಧನೆ ಹಿಂದಿನ-

ಮುಂದಿನ ಜನತೆಗೆ ದಾರಿದೀಪವಾಗುತ್ತದೆ, ಮತ್ತು ಮಾರ್ಗದರ್ಶಿಯಾಗುತ್ತದೆ ಎಂಬ ನಂಬಿಕೆ ಹಾಗೂ ದಿನಕರ ದೇಸಾಯಿಯವರ ಚೈತನ್ಯಶೀಲ ವ್ಯಕ್ತಿತ್ವದ ಆಕರ್ಷಣೆ ಆಕರ್ಷಣೆ ಹಿಡಿ ರಾಷ್ಟ್ರ ಇಡೀ ದೇಶಕ್ಕೆ ಇದೆ. ದಿನಕರದೇಸಾಯಿಯವರು, ಅನೇಕ ಸಾಮಾಜಿಕ ಸಮಸ್ಯೆಗಳಿಗೆ ತಮ್ಮ ಪ್ರತಿಕ್ರಿಯೆಯನ್ನು ಸಮರ್ಥವಾಗಿ ನೀಡಿದ್ದಾರೆ. ಸಮಯಬಂದಾಗ, ಅವರ ಪರಿಮಿತಿಯಲ್ಲಿ ಅನೇಕ ಜನಪರ ಕಾರ್ಯಗಳನ್ನು ಮಾಡಿ ಅನುಕರಣೀಯರಾಗಿದ್ದಾರೆ. ಆದರ್ಶಮಯ ಜೀವನವನ್ನು ನಡೆಸಿದ ಜನಪರ-ಸಾಹಿತಿ, 'ದಿನಕರ್' ರವರು, ನವೆಂಬರ್, ೬, ರ ೧೯೮೨ ರಲ್ಲಿ ತಮ್ಮ ಕೊನೆಯುಸಿರೆಳೆದರು.

## ಪರಾಮರ್ಶನ ಗ್ರಂಥಗಳು


1. ಕನ್ನಡಪ್ರಭ, ಆ.೨೬, ೧೯೬೮
2. ಯು.ಆರ್.ಅನಂತಮೂರ್ತಿ, ಪೂರ್ವಾಪರ- ಪುಟ ೧೩೭
3. ಶಂಕರ ಮೊಕಾಶಿ ಪುಣೇಕರ: ಕನ್ನಡ ಕಾವ್ಯದಲ್ಲಿ ನವ್ಯತೆ, (ಸಂಕ್ರಮಣ ೫೫, ಸಂಪುಟ ೧೦, ಸಂಚಿಕೆ ೧, ಆಗಸ್ಟ್ ೧೯೭೩)
4. ಡಿ.ಆರ್.ನಾಗರಾಜ- ನವ್ಯ ಚಳುವಳಿ: ಕೆಲವು ಚೆಲ್ಲಾಪಿಲ್ಲಿ ಚಿಂತನೆಗಳು, ಸಂಕ್ರಮಣ- ೧೯೭, ಸಂಪುಟ ೨೪, ಸಂಚಿಕೆ ೧, ಜನವರಿ ೧೯೮೯
5. ಶಾಂತಿನಾಥ ದೇಸಾಯಿ: ಕನ್ನಡ ನವ್ಯ ಕವಿತೆಯಲ್ಲಿಯ ಮನೋಧರ್ಮ, ಸಂಕ್ರಮಣ ೭, ಸಂಪುಟ ೨, ಸಂಚಿಕೆ ೧, ಆಗಸ್ಟ್ ೧೯೬೫
6. ಶಾಂತಿನಾಥ ದೇಸಾಯಿ: ಕನ್ನಡ ನವ್ಯ ಕವಿತೆಯಲ್ಲಿಯ ಮನೋಧರ್ಮ, ಸಂಕ್ರಮಣ ೭, ಸಂಪುಟ ೨, ಸಂಚಿಕೆ ೧, ಆಗಸ್ಟ್ ೧೯೬೫, ಒಂದು ಪತ್ರ: ಗಿರೀಶ ಕಾರ್ನಾಡ, ಸಂಕ್ರಮಣ ೮, ಸಂಪುಟ ೨, ಸಂಚಿಕೆ ೨, ಅಕ್ಟೋ- ೧೯೬೫.
7. ಕರ್ನಾಟಕ ಭಾರತಿ- ಸಂಪುಟ ೧೮, ಸಂಚಿಕೆ ೨-೩
8. ಬಂಡಾಯ ಸಾಹಿತ್ಯ- ಪೋಲಂಕಿ ರಾಮಮೂರ್ತಿ, ಶೂದ್ರ; ಮಾರ್ಚ್ ೧೯೭೨, ಪುಟ ೮.
9. ದಲಿತ ಸಾಹಿತ್ಯ: ನಿಂತ ಬದುಕಿಗೊಂದು ಹೊಸ ಸೆಲೆ- ತೇಜಸ್ವಿ ಕಟ್ಟೀಮನಿ- ಕ.ಭಾ.- ಸಂಪುಟ ೧೮, ಸಂಚಿಕೆ ೨-೩,
10. ದಲಿತ ಸಾಹಿತ್ಯ: ನಿಂತ ಬದುಕಿಗೊಂದು ಹೊಸ ಸೆಲೆ- ಕ.ಭಾ.- ಸಂಪುಟ ೧೮, ಸಂಚಿಕೆ ೨೩